# ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.

ಜಾ.ಸಾ ಃ 15

ಪ್ರಾ.ಸಾ ಃ 13

ಸಾಕ್ಷಿದಾರರ ಹೆಸರು ಃ ಗಾಯತ್ರಿ ನಾಯಕ

ಗಂಡನ ಹೆಸರು ಃ ಹರೀಶ ಮಲ್ಯ

ಪ್ರಾಯ ಃ 44 ವರ್ಷ

ಉದ್ಯೋಗ ಃ ಅಂಚೆ ಕಚೇರಿ ಉದ್ಯೋಗಿ

ವಾಸಸ್ಥಾನ : ಬನ್ನೂರು

ಪ್ರಮಾಣ ವಚನ ಭೋದಿಸಿದ ದಿನಾಂಕ ಃ **28.03.2024**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಈಗ ತೋರಿಸುತ್ತಿರುವ ನಿಪಿ-81 ರಲ್ಲಿ ನನ್ನ ಸಹಿ ಇದ್ದು, ಸಾಕ್ಷಿ ಸಹಿಯನ್ನು ನಿಪಿ-81ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 10-12-2020 ರಂದು ಪುತ್ತೂರು ಅಂಚೇ ಕಚೇರಿಯ ಹಿರಿಯ ಅಧೀಕ್ಷಕರ ಕಚೇರಿಯಲ್ಲಿ ಮಾಡಿದ್ದೇನೆ . ಪೋಲಿಸರು ಸ್ವತ್ತು ಸ್ವಾಧೀನತಾ ಮಹಜರನ್ನು ಮಾಡುವಾಗ ಮೋಹನರವರು ಆರೋಪಿಯ ಹಸ್ತಾಕ್ಷರವಿರುವ ಬಿಒ ಜರ್ನಲ್‌ನ್ನು ಪೋಲಿಸರು ಹಸ್ತಾಂತರಿಸಿರುತ್ತಾರೆ . ಆ ಸಮಯದಲ್ಲಿ ಪೋಲಿಸರು ಬೆಃ 10-30 ರಿಂದ 11-30 ರವರೆಗೆ ಮಹಜರ ಕ್ರಮ ಜರುಗಿಸಿರುತ್ತಾರೆ . ಕೆಲವು ಪುಟಗಳಲ್ಲಿ ಆರೋಪಿ ಸಹಿ ಇರುವ ಹಸ್ತಾಕ್ಷರವನ್ನು ಆಯಾತಾಕಾರದಲಿ ಕೆಂಪು ಬಣ್ಣದಲ್ಲಿ ಮಾರ್ಕ ಮಾಡಿ ಅದಕ್ಕೆ ಎಸ್-1 ರಿಂದ ಎಸ್-12 ಎಂದು ಗುರುತುಕೊಟ್ಟಿರುತ್ತಾರೆ . ಅದೇ ಬುಕ್ಕನಲ್ಲಿ ಇರುವ ಆರೋಪಿಯ ಇಂಗ್ಲೀಷ ಬರವಣಿಗೆಯನ್ನು ಆಯತಾಕಾರಣದಲ್ಲಿ ಕೆಂಪು ಬಣ್ಣದಿಂದ ಮಾರ್ಕ ಮಾಡಿ ಎಸ್-13 ರಿಂದ ಎಸ್-18 ರವರೆಗೆ ಗುರುತು ನೀಡಿದ್ದಾರೆ . ಅದರಲ್ಲಿ

ಇರುವ ಅಂಕಿಯನ್ನು ಸಹ ಅದೇ ರೀತಿ ಆಯತಾಕಾರಣದಲ್ಲಿ ಕೆಂಪು ಬಣ್ಣದಿಂದ ಮಾರ್ಕ ಮಾಡಿ ಎಸ್-25 ರಿಂದ ಎಸ್-30 ರವರೆಗೆ ಗುರುತು ನೀಡಿದ್ದಾರೆ . ನನ್ನ ಜೊತೆ ಚಾಸಾ-16 ರವರು ಸಹಿ ಮಾಡಿರುತ್ತಾರೆ .

ಸಾಕ್ಷಿಗೆ ಮಹಜರ ಸಮಯದಲ್ಲಿ ನೀಡಿದ ನೋಟಿಸು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-83 ಎಂದು ಸಾಕ್ಷಿ ಸಹಿ ನಿಪಿ-83 ಎ ಎಂದು, ಬಿಒ ಜರ್ನಲನ್ನು ಕನೂರು ಅಂಚೆ ಕಚೇರಿಗೆ ಸಂಬಂಧಿಸಿದ ದಾಖಲಾತಿಯಾಗಿರುತ್ತದೆ . ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ-82 ನ್ನು ತೋರಿಲಸಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಡಿ ಕೆ ವಕೀಲರಿಂದಃ**

ನಾನು ಪುತ್ತೂರು ಅಂಚೇ ವಿಭಾಗದಲ್ಲಿ ಅಂಚೇ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ . ಆ ಸಮಯದಲ್ಲಿ ಪುತ್ತೂರಿನ ಹಿರಿಯ ಅಂಚೆ ಅದೀಕ್ಷಕರಾಗಿ ಎಂಜೆಲರಾಜ ಇದ್ದರು . ಆ ದಿನ ಅವರು ಅಂಚೆ ಕಚೇರಿಯಲ್ಲಿ ಇದ್ದ ಬಗ್ಗೆ ನನಗೆ ನೆನಪು ಇಲ್ಲ . ನಿಮಗೆ ಹಿರಿಯ ಅಧೀಕ್ಷಕರ ಕಚೇರಿಗೆ ಬರಬೇಕು ಎಂದು ಯಾರು ತಿಳಿಸಿರುತ್ತಾರೆ ಎಂದರೆ ನಾನು ಅಲ್ಲಿಯೇ ಕೆಲಸ ಮಾಡುತ್ತಿದ್ದೆ ನಾನು ಅಲ್ಲಿಯೇ ಇದ್ದೆ . ನನಗೆ ನೋಟಿಸನ್ನು ಮಹರಜ ಮಾಡುವ ಕಾಲಕ್ಕೆ ಅಲ್ಲಿಯೇ ಕೊಟ್ಟಿರುತ್ತಾರೆ . ನಾನು ಅಂಚೆ ಕಚೇರಿಯಲ್ಲಿ ಒಟ್ಟು ಎಷ್ಟು ಸಹಿ ಕೊಟ್ಟಿದ್ದೇನೆ ಎಂದು ನೆನಪು ಇಲ್ಲ ಆದರೆ ಮಹಜರಿಗೆ ಸಹಿ ನೀಡಿದ್ದೇನೆ . ನಮ್ಮ ಹಿರಿಯ ಅಧೀಕ್ಷಕರ ಕಚೇರಿಗೆ ಇಬ್ಬರು ಪೋಲಿಸರು ಬಂದಿದ್ದರು ಅದರಲ್ಲಿ ಒಬ್ಬರು ಪಿಎಸ್ಐ ಇನ್ನೊಬ್ಬರು ಅವರ ಸಿಬ್ಬಂದಿ. ಅವರು ಬರುವ ಸವಯದಲ್ಲಿ ನಾನು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ . ನಮ್ಮ ಕಚೇರಿಯಲ್ಲಿ ಆಗ 12 ರಿಂದ 13 ಜನ ಕೆಲಸ ಮಾಡುತ್ತಿದ್ದರು . ಪಿಎಸ್ಐ ರವರು ಮೊಹನ ರವರಿಗೆ ಕೋರಿಕೆ ಪತ್ರವನ್ನು

ತೋರಿಸಿರುತ್ತಾರೆ . ನಾನು ನೋಡುವಾಗ ಮೊಹನ ರವರ ಕೈಯಲ್ಲಿ ಆ ಜರ್ನಲ್ ಇತ್ತು . ನಾನು ನೋಡುವಾಗ ಅದನ್ನು ಮೊಹನ ರವರು ಪೋಲಿಸರಿಗೆ ಹಸ್ತಾಂತರಿಸಿರುತ್ತಾರೆ . ಪೋಲಿಸರಿಗೆ ಮೊಹನರವರು ಜರ್ನಲ ಹಸ್ತಾಂತರಿಸುವಾಗ ನಾನು ಎಲ್ಲಾ ಪುಟಗಳನ್ನು ನೋಡಿಲ್ಲ . ನನಗೆ ಆರೋಪಿ ಹೇಗೆ ಸಹಿ ಮಾಡುತ್ತಾರೆ ಮತ್ತು ಅವರ ಬರವಣಿಗೆಯನ್ನು ನೀವು ನೊಡಿರುತ್ತೀರಾ ಎಂದರೆ ಅವರು ನನ್ನ ಎದುರುಗಡೆ ಯಾವತ್ತು ಬರವಣಿಗೆ ಮಾಡಿಲ್ಲ ಮತ್ತು ಸಹಿ ಮಾಡಿಲ್ಲ ಆದರೆ ಅಂಚೇ ಕಚೇರಿಯಲ್ಲಿ ಅವರು ಹಾಕಿರುವ ಸಹಿ ಮತ್ತು ಬರವಣಿಗೆಗಳನ್ನು ದಾಖಲಾತಿಯಲ್ಲಿ ನೋಡಿದ್ದೇನೆ .

ಕರ್ನೂರು ಅಂಚೇರಿಯಲ್ಲಿ ಆರೋಪಿ ಎಲ್ಲಿಂದ ಎಲ್ಲಿಯವರೆಗೆ ಕರ್ತವ್ಯ ನಿರ್ವಹಿಸಿದ್ದಾನೆ ಎಂದು ನನಗೆ ನೆನಪು ಇಲ್ಲ ದಾಖಲೆ ನೋಡಿ ಹೇಳಬೇಕಾಗುತ್ತದೆ . ಅದರಲ್ಲಿ ಬಿಒ ಲೆಡ್ಜರನಲ್ಲಿ ಒಟ್ಟು 200 ಪುಟಗಳು ಇತ್ತು . ಯಾವ ಯಾವ ಪುಟಗಳಲ್ಲಿ ಯಾವ ಯಾವ ದಿನಾಂಕದಂದು ಎನೆಲ್ಲ ಬರೆಯಲಾಗಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ಹೇಳಬಹುದಾ ಎಂದರೆ ನಿಖರವಾಗಿ ಹೇಳಲಾಗುವುದಿಲ್ಲ .

ದಿಃ 10-12-2020 ರಂದು ಅಂಚೇ ಕಚೇರಿಯಲ್ಲಿ ಆರೋಪಿ ಹಾಜರು ಇರಲಿಲ್ಲ ಎಂದರೆ ಸರಿ . ಅದೇ ರೀತಿ ಯಾವ ಯಾವ ಪುಟಗಳಲ್ಲಿ ಯಾವ ಯಾವ ಭಾಷೆಗಳಲ್ಲಿ ಬರೆಯಲಾಗಿದೆ ಎಂದು ನಿಮಗೆ ಹೇಳಲಾಗುವುದಿಲ್ಲ ಎಂದರೆ ಸರಿ . ಎಸ್-1 ರಿಂದ ಎಸ್-30 ರವರೆಗೆ ಎನೆಲ್ಲ ಬರೆಯಲಾಗಿದೆ ಎಂದು ಹೇಳಬಹುದಾ ಎಂದರೆ ಈಗ ನನಗೆ ನೆನಪು ಇಲ್ಲ . ಆಯತಾಕಾರದಲ್ಲಿ ಕೆಂಪು ಬಣ್ಣದಲ್ಲಿ ಯಾರು ಮಾಡಿದ್ದು ಎಂದರೆ ಪಿಎಸಐ ರವರು ಮಾಡಿದ್ದು. ಇದನ್ನೆಲ್ಲ ಟೈಪ್ ಮಾಡಿದ್ದು ಪೊಲಿಸ ಸಿಬ್ಬಂದಿ . ಅದು ಯಾರು ಎಂದು ಗೊತ್ತಿಲ್ಲ . ಸದರಿ ಮಹಜನ್ನು ಯಾರು ಬರೆದಿರುತ್ತಾರೆ ಎಂದು ನಿಮಗೆ ಗೊತ್ತಾ ಎಂದರೆ ಉದಯರವಿ ಪಿಎಸ್ಐ . ಪ್ರಿಂಟನ್ನು ಎಲ್ಲಿ ತೆಗೆದಿರುತ್ತಾರೆ ಎಂದರೆ ಲ್ಯಾಪಟಾಪ ತೆಗೆದಿದ್ದರು ನಮ್ಮ ಅಂಚೇ ಕಚೇರಿಯಿಂದ ಅದರ ಕಾಪೀಯನ್ನು ತೆಗೆದಿರಬೇಕು .

ನಾನು ಸಹಿ ಮಾಡಿದ ನಿಪಿ-81 ರಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನನಗೆ ಈಗ ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಸರಿ . ನಾನು ಮೊಹನ ರವರ ಜೊತೆ ಸಂಪ್ಯ ಪೋಲಿಸ ಠಾಣೆಗೆ ಹೋಗಿದ್ದು ಇಲ್ಲ . ನೀವು ನಿಮ್ಮ ಮೇಲಾಧಿಕಾರಿಯಾದ ಮೊಹನ ರವರ ಜೊತೆ ಹೋಗಿ ಸಂಪ್ಯ ಪೋಲಿಸ ಠಾಣೆಯಲ್ಲಿ ಸಹಿ ಕೊಟ್ಟಿರುತ್ತೀರಿ ಎಂದರೆ ಅವರೆ ನಮ್ಮ ಕಚೇರಿಗೆ ಬಂದಿದ್ದರು ನಾನು ಮೊಹನ ರವರ ಜೊತೆಗೆ ಸಂಪ್ಯ ಪೋಲಿಸ ಠಾಣೆಗೆ ಹೋಗಿ ಸಹಿ ಕೊಟ್ಟಿದ್ದೇನೊ ಇಲ್ಲವೊ ಎಂದು ನನಗೆ ನೆನಪು ಇಲ್ಲ . ನಿಪಿ-81 ನ್ನು ಹಿರಿಯ ಅಂಚೇ ಅದೀಕ್ಷಕರ ಕಚೇರಿಯಲ್ಲಿ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ . ಮೊಹನ ರವರು ಪೋಲಿಸರಿಗೆ ನಿಪಿ-81 ನ್ನು ಹಸ್ತಾಂತರಿಸಿದ್ದು ಇಲ್ಲ ಎಂದರೆ ಸರಿಯಲ್ಲ . ನಿಪಿ-81 ನ್ನು ಪ್ರಥಮವಾಗಿ ನ್ಯಾಯಾಲಯದಲ್ಲಿ ನೋಡುತ್ತಿರುವುದು ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಮಾಡಿಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.